# ಅಪರ ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ ನ್ಯಾಯಾಲಯ, ಚನ್ನಪಟ್ಟಣ

## CC No. 3579/2024

| | | |
|---|---|---|
| ಸಾಕ್ಷಿದಾರರ ಹೆಸರು | : | ಗೋವಿಂದರಾಜು |
| ತಂದೆಯ ಹೆಸರು | : | ತಿಮ್ಮೇಗೌಡ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ, ಚನ್ನಪಟ್ಟಣ. |
| ವಾಸಸ್ಥಳ | : | ಚನ್ನಪಟ್ಟಣ |

ಸಾಕ್ಷಿಯನ್ನುಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆ ಎ.ಪಿ.ಪಿ ಯವರಿಂದ: ದಿಃ. 18.06.2026

---

ಚಾಸಾ-3 ನನಗೆ ಗೊತ್ತು. ಚಾಸಾ-1 ನನಗೆ ಗೊತ್ತಿಲ್ಲ. ಆರೋಪಿಯು ಮೊದಲಿನಿಂದಲೂ ನನಗೆ ಗೊತ್ತು. ಈ ಕೇಸಿನ ಬಗ್ಗೆ ನನಗೆ ಏನು ಗೊತ್ತಿಲ್ಲ. ದಿನಾಂಕ ನನಗೆ ನೆನಪಿಲ್ಲ. ಚನ್ನಪಟ್ಟಣದ ಮಾಲ್ಗುಡಿ ಟೀ ಶಾಪ್ ನಲ್ಲಿ ಟೀ ಕುಡಿಯುತ್ತಿದ್ದ ಸಂದರ್ಭದಲ್ಲಿ ಅಬಕಾರಿ ಪೊಲೀಸರು ಬಂದು ಒಂದು ದಾಖಲೆ ಮೇಲೆ ನನ್ನ ಸಹಿಯನ್ನು ಪಡೆದಿರುತ್ತಾರೆ. ಸದರಿ ದಾಖಲೆ ಏನೆಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ದಾಖಲೆ ತೋರಿಸಿ ತಮ್ಮ ಸಹಿಯಾ ಎಂದು ನೋಡಿ ಗುರುತಿಸುವಂತೆ ಕೇಳಿದ್ದು ಸಾಕ್ಷಿಯು ತನ್ನ ಸಹಿಯನ್ನು ಗುರುತಿಸಿದ್ದು ಸದರಿ ದಾಖಲೆ ಸ್ಥಳ ಮಹಜರ್ ಆಗಿದ್ದು, ಸ್ಥಳ ಮಹಜರ್ ನ್ನು ನಿಪಿ-1, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಮಹಜರ್ ನಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ.

CC No.3579/2024
CW-2/ PW-1

**ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ತೀರ್ಮಾನಿಸಿ ಅಭಿಯೋಜಕರ ಕೋರಿಕೆಯ ಮೇರೆಗೆ ಪಾಟೀ ಸವಾಲುಗೆ ಅನುಮತಿಸಲಾಯಿತು. ಪಾಟೀ ಸವಾಲುಃ ಎ.ಪಿ.ಪಿ. ಯವರಿಂದಃ-**

ದಿ 08.04.2021 ರಂದು ಆರೋಪಿಯು ವರದರಾಜ ಸ್ವಾಮಿ ದೇವಸ್ಥಾನದ ಬಳಿ ಮೋಟಾರ್ ಸೈಕಲ್ ನಲ್ಲಿ ಬರುತ್ತಿದ್ದಾಗ ಸದರಿ ವಾಹನವನ್ನು ಪೊಲೀಸರು ತಡೆದು ತಪಾಸಣೆ ಮಾಡಿ ನೋಡಿದಾಗ ಆತನ ಬಳಿ ಒಟ್ಟು 12 .600 ಲೀಟರ್ ಮದ್ಯದ ಬಾಟಲ್ ಗಳು ಮತ್ತು 9.750 ಲೀಟರ್ ಬಿಯರ್ ಇದ್ದಿದ್ದು ಕಂಡುಬಂದಿದ್ದು ಸದರಿ ವಿಚಾರವಾಗಿ ಪೊಲೀಸರು ಅದೇ ದಿನ ಮಧ್ಯಾಹ್ನ 1-15 ಸಮಯಕ್ಕೆ ನನ್ನ ಮತ್ತು ಚಾಸಾ-3ರವರ ಸಮಕ್ಷಮ ಘಟನೆ ನಡೆದ ಸ್ಥಳದಲ್ಲಿ ಸ್ಥಳ ಮಹಜರ್ ಕ್ರಮ ಜರುಗಿಸಿ ಆರೋಪಿತನು ಹೊಂದಿದ್ದ 12.600 ಲೀಟರ್ ಮದ್ಯ ಮತ್ತು 9.750 ಲೀಟರ್ ಬಿಯರ್ ಮತ್ತು ಆತನು ಚಲಾಯಿಸುತ್ತಿದ್ದ ಕಪ್ಪು ಬಣ್ಣದ ಹಿರೋ ಹೋಂಡಾ ಸ್ಪ್ಲೆಂಡರ್ ನೊಂದಾವಣೆ ಸಂಖ್ಯೆ ಕೆಎ-01-ಇಪಿ-1276 ವಾಹನವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳದಲ್ಲೆ ಹಾಜರಿದ್ದು ಸದರಿ ಮಹಜರ್ ವಿಚಾರವನ್ನು ಪೊಲೀಸರಿಂದ ಕೇಳಿ ತಿಳಿದು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತನು ತಮಗೆ ಈ ಹಿಂದೆ ಪರಿಚಯ ಇದ್ದುದ್ದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.